# IN THE COURT OF THE ADDL. SENIOR CIVIL JUDGE & JMFC., GUBBI

# OS -200/2024

Witness present and duly sworn on : 21-07-2026

Further Cross Examination: by Counsel for Defendant No.1 to 3 :

ವಾದ ಪತ್ರದಲ್ಲಿ ನಾನು ತೋರಿಸಿರುವ ನನ್ನ ವಿಳಾಸ ಅಂದರೆ ಬೆಂಗಳೂರಿನಲ್ಲಿ ಸುಮಾರು 8-9 ವರ್ಷಗಳಿಂದ ವಾಸ ಇದ್ದೇನೆ. ನನ್ನ ಹುಟ್ಟೂರು ಎಸ್ ಕೊಡಿಗೇಹಳ್ಳಿ ಎಂದರೆ ಸರಿ . ನನ್ನ ಮದುವೆಯಾಗಿ 35 ವರ್ಷಗಳಾಗಿವೆ. ಮದುವೆಯ ನಂತರ ನಾನು ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ವಾಸ ಇದ್ದೆನು. 2 ನೇ ವಾದಿ ವಸಂತಮ್ಮ ನವರು ಮದುವೆಯ ನಂತರ ಗುಬ್ಬಿ ತಾಲ್ಲೂಕು ಗೋಳೇನಹಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ . ವಾದಿಗಳು ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ 2 ಪಿತ್ರಾರ್ಜಿತ ಆಸ್ತಿಗಳು . ಉಳಿದ ಆಸ್ತಿಗಳು ನನ್ನ ತಂದೆ ಖರೀದಿ ಮಾಡಿರುವ ಆಸ್ತಿಗಳು. ನನ್ನ ತಂದೆ ಖರೀದಿ ಮಾಡಿರುವ ಆಸ್ತಿಗಳು ಸರ್ವೆ ನಂ 16/2, 112 ಮತ್ತು ಇತರೆ ಆಸ್ತಿಗಳು ನನಗೆ ನೆನಪಿಲ್ಲ. ನನ್ನ ತಂದೆ ಸದರಿ ಆಸ್ತಿಗಳನ್ನು ಯಾವಗ ಖರೀದಿ ಮಾಡಿದ್ದಾರೆ ಎಂದರೆ ನನಗೆ ನೆನಪಿಲ್ಲ. ನನ್ನ ತಂದೆಯು ಸ್ವಂತ ದುಡಿಮೆಯಿಂದ ಖರೀದಿ ಮಾಡಿರುವ ಆಸ್ತಿಗಳು . ಮದುವೆಯ ನಂತರ ನನ್ನ ತಂದೆ ತಾಯಿಯನ್ನು ನಾವು ಮತ್ತು ನಮ್ಮ ಸಹೋದರರು ನೋಡಿಕೊಳ್ಳುತ್ತಿದ್ದರು. ನನ್ನ ತಂದೆ ತಾಯಿಯನ್ನು ನೋಡಿಕೊಳ್ಳಲು ನಾವು ಆರ್ಥಿಕ ಸಹಾಯ ಮಾಡಿರುತೇವೆ. ನನ್ನ ತಾಯಿ ಲಕ್ಷ್ಮಮ್ಮ ಮರಣ ಹೊಂದಿದ್ದಾರೆ. ನನ್ನ ತಾಯಿಯು ದಿಃ 05-01-2026 ರಂದು ಮರಣಹೊಂದಿರುತ್ತಾರೆ. 4 ನೇ ಪ್ರತಿವಾದಿ ಗೀತಾ ರವರು ಕೊಡಿಗೇಹಳ್ಳಿಪಾಳ್ಯ ದವರು. ಅವರು ನಮ್ಮ ಕುಟುಂಬಕ್ಕೆ ಸಂಬಂಧಿಕರು ಹಾಗೂ ಸ್ನೇಹಿತರಲ್ಲ.

ದಿಃ 29-06-2024 ರಂದು ನನ್ನ ತಾಯಿಯು ಸಹ ಬಂದಿದ್ದರು . ದಿಃ 29-06-2024 ರ ಒಂದು ತಿಂಗಳ ಮೊದಲು ನನ್ನ ತಮ್ಮ ಮನೆ ಕಟ್ಟಿರುವ ಕಾರಣ  ಕಷ್ಟ ಇದೆ ಆದ ಕಾರಣ ಬ್ಯಾಂಕ್ ನಲ್ಲಿ ಸಾಲ ಪಡೆಯುತ್ತೇನೆ ಎಂದು ದಾಖಲೆಗೆ ಸಹಿ ಮಾಡಲು ಕೇಳಿದರು. ಸದರಿ ವಿಚಾರವನ್ನು

ದೂರವಾಣಿ ಮೂಲಕ ನನಗೆ ತಿಳಿಸಿದರು. ಬೋಗ್ಯ ಪತ್ರವನ್ನು ಯಾರಿಗೆ ಮತ್ತು ಎಷ್ಟು ಮೌಲ್ಯಕ್ಕೆ ಮಾಡುತ್ತೇನೆ ಎಂದು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ದಿಃ 29-06-2024 ರಂದು ನನ್ನ ತಾಯಿಯ ಮನೆಯಿಂದ ಬಂದಿರಲಿಲ್ಲ. ಸದರಿ ದಿನದಂದು ನನ್ನ ತಾಯಿಯ ಮೂಲಕ ತಿಳಿದುಕೊಳ್ಳಲು ಪ್ರಯತ್ನಪಟ್ಟಿದ್ದೀರಾ ಎಂದರೆ ನನ್ನ ತಾಯಿಗೆ ವಿಷಯ ಗೊತ್ತಿರಲಿಲ್ಲ. ಮನೆ ಕಟ್ಟಿ ಕಷ್ಟ ಇರುವ  ಕಾರಣ ನನ್ನ ತಾಯಿ ಮತ್ತು ನನ್ನ ತಮ್ಮ ರಾಮ್ ಕುಮಾರ್ ರವರು ಹೇಳಿದಂತೆ ದಾವಾ ಐಟಂ 1 ಆಸ್ತಿಯನ್ನು 4 ನೇ ಪ್ರತಿವಾದಿಗೆ ದಿಃ 29-06-2024 ಮಾರಾಟ ಮಾಡುವ ಉದ್ದೇಶದಿಂದ ನಾವು ಗುಬ್ಬಿ ಯ ಉಪನೊಂದಣಿ ಕಚೇರಿಗೆ ಬಂದಿದ್ದವು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ದಾಖಲೆಗಳು ನನ್ನ ತಂದೆಯ ಮರಣದ ನಂತರ ನನ್ನ ತಮ್ಮ ರಾಮ್ ಕುಮಾರ್ ರವರ ಹೆಸರಿಗೆ ಆಗಿರುತ್ತದೆ. ನಾವು ಮತ್ತು ನನ್ನ ತಮ್ಮ ಚೆನ್ನಾಗಿ ಮಾತನಾಡಿಕೊಂಡು ಇದ್ದೆವು ಎಂದರೆ ಸರಿ . ನನ್ನ ತಂದೆ 2015 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಯ ಜೀವಿತಾವಧಿಯಲ್ಲಿ ಮತ್ತು ನನ್ನ ತಂದೆಯ ಮರಣದ ನಂತರ ನನ್ನ ತಾಯಿಯ ಜೀವಿತಾವಧಿಯಲ್ಲಿ ಆಸ್ತಿಗಳಲ್ಲಿ ಬಾಗ ಕೇಳಿರುವುದಿಲ್ಲ. ನಾವು ನಮ್ಮ ತಮ್ಮನೊಂದಿಗೆ ಚೆನ್ನಾಗಿ ಇದ್ದ ಕಾರಣ ನನ್ನ ತಂದೆಯ ಮರಣದ ನಂತರ 2018-19 ರಲ್ಲಿ ನನ್ನ ತಮ್ಮನ ಹೆಸರಿಗೆ ಪೌತಿ ವಾರಸುದಾರ ಖಾತೆ ಬದಲಾವಣೆ ಆಗಿದೆ ಎಂದರೆ ಮೋಸದಿಂದ ಮಾಡಿಸಿಕೊಡಿರುತ್ತಾರೆ.ದಾವಾ ಆಸ್ತಿಗಳು ಎಂ ಆರ್ ಹೆಚ್ 25/2018-19 ರಂದು ನನ್ನ ತಮ್ಮನ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಮೋಸದಿಂದ ಮಾಡಿಸಿಕೊಡಿರುತ್ತಾರೆ. 2018-19 ರಿಂದ ಇಲ್ಲಿಯವರಗೊ ದಾಖಲೆಗಳು ಯಾರ ಹೆಸರಿಗೆ ಇದೆ ಎಂದು ನಾವು ಪರಿಶೀಲನೆ ಮಾಡಿರುವುದಿಲ್ಲ. ನನ್ನ ತಮ್ಮನ ಹೆಸರಿಗೆ ಆಸ್ತಿಗಳು ಇದ್ದ ಕಾರಣ 14 ಗುಂಟೆ ಜಮೀನನ್ನು ನಮ್ಮನ್ನು ಕರೆಯದೆ ಮಾರಾಟ ಮಾಡಬಹುದಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ವಾದಿಗಳಿಗೆ ಮನೆ ಕಟ್ಟಿಸಿ ಹಣದ ಸಹಾಯ ಮಾಡಿದ ಕಾರಣ ನನ್ನ ತಾಯಿಯು 14 ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿಸಿದ್ದು ಸದರಿ ವಿಚಾರ ನಮಗೆ ಗೊತ್ತಿದೆ ಎಂದರೆ ಸರಿಯಲ್ಲ.

ಯಾವ ಬ್ಯಾಂಕಿನಿಂದ ಸಾಲ ಪಡೆಯಲು ನಮ್ಮನ್ನು ಕರೆಸಿದರು ಎಂದರೆ ಬ್ಯಾಂಕ್ ನ ಹೆಸರು ಹೇಳಿಲ್ಲ. ಎಷ್ಟು ಸಾಲ ಪಡೆಯುವ ಬಗ್ಗೆ ಹೇಳಿದರು ಎಂದರೆ ಸದರಿ ಮಾಹಿತಿ ಹೇಳಿರುವುದಿಲ್ಲ. 14 ಗುಂಟೆ ಜಮೀನು ಮಾರಾಟ ಆಗಿರುವ ಮೊತ್ತವನ್ನು ನಾವು ಮತ್ತು ನಮ್ಮ ತಾಯಿ ಮತ್ತು ತಮ್ಮ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ11 ದಾಖಲೆಯಲ್ಲಿ ನನ್ನ ಮತ್ತು

2 ನೇ ವಾದಿ ವಸಂತಮ್ಮ ರವರ ಛಾಯಚಿತ್ರ ಮತ್ತು ಸಹಿ ಇದೆ ಎಂದರೆ ಸರಿ . ನಿಪಿ 11 ರಲ್ಲಿ ಇರುವ ಸಾಕ್ಷಿ ಮತ್ತು 2 ನೇ ವಾದಿಯ ಛಾಾಯಚಿತ್ರ ಮತ್ತು ಸಹಿಯನ್ನು ನಿಪಿ11 ಎ ರಿಂದ ಡಿ ಎಂದು ಗುರತಿಸಲಾಯಿತು. ನನ್ನ ತಾಯಿ ಬಡ್ಡಿ ಕಟ್ಟಲು ಒಂದು ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಮತ್ತು ಉಳಿದ ಆಸ್ತಿಗಳಿಗೆ ನಮ್ಮ ಹಕ್ಕು ಖುಲಾಸೆ ಪಡೆದಿದ್ದಾರೆ ಎಂದರೆ ಮೋಸದಿಂದ ಪಡೆದಿರುತ್ತಾರೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ ಮತ್ತು ನನ್ನ ತಾಯಿ ಎಲ್ಲಾ ವಿಷಯವನ್ನು ಹೇಳಿದ್ದರೂ ಸಹ ನನ್ನ ತಮ್ಮನಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಂಗಿಗೆ ಮನೆ ಕಟ್ಟಲು ಆರ್ಥಿಕ ಸಹಾಯ ಮಾಡಿದ ಕಾರಣ ನನ್ನ ತಮ್ಮನಿಗೆ ನನ್ನ ತಾಯಿ ಹೇಳಿದಂತೆ ಹಕ್ಕು ಖುಲಾಸೆ ಮಾಡಿದೇವೆ ಎಂದರೆ ಸರಿಯಲ್ಲ. ನಾವು ನಮ್ಮ ತಾಯಿಯ ಜೊತೆಯಲ್ಲಿ ಅವರು ಹೇಳಿದಂತೆ ದಾಖಲೆ ಮಾಡಿಕೊಟ್ಟಿದ್ದರೂ ಸಹ ನನ್ನ ತಮ್ಮನಿಗೆ ತೊಂದರೆ ಕೊಡಲು ಆಸ್ತಿಗಳಲ್ಲಿ ಬಾಗ ಬರಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi